# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಛೇರಿ,
ನಂ. 29, ವಿಜಯನಗರ 2ನೇ ಹಂತ, ಹಿನ್‌ಕಲ್,
ಮೈಸೂರು-570017.
ದೂರವಾಣಿ : 0821-2417107
Website : www.cescmysore.org
CIN: U40109KA2004SGC035177

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ-ವಿಭಾಗ,
ನುಗ್ಗೇಹಳ್ಳಿ-573131
ದೂರವಾಣಿ : 08176-233020
08176-233057
Email:aeenuggehalli07@rediffmail.com


ಸಂಖ್ಯೆ:ಸಕಾನಿಇಂ(ವಿ)/ಸ.ಇ(ತಾಂ)/ನುಹ/2018-19: 1867-70　　　　ದಿನಾಂಕ: 27-9-18

## ಜನಸಂಪರ್ಕ ಸಭಾ ನಡಾವಳಿ

ದಿನಾಂಕ : 22-09-2018 ರಂದು ಮದ್ಯಾಹ್ನ 03:00 ಗಂಟೆಗೆ ನುಗ್ಗೇಹಳ್ಳಿ ಉಪ ವಿಭಾಗದ ಕಛೇರಿ ಆವರಣದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಹಾಸನ ವೃತ್ತ, ಹಾಸನ ರವರ ಅಧ್ಯಕ್ಷತೆಯಲ್ಲಿ ನಡೆದ " ಜನ ಸಂಪರ್ಕ ಸಭೆ " ಯ ನಡಾವಳಿಗಳು.

### ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು

ಶ್ರೀಯುತರುಗಳಾದ :-

1. ಶ್ರೀ ಸುಚೇತನ್ — ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಹಾಸನ ವೃತ್ತ, ಹಾಸನ.
2. ಶ್ರೀಮತಿ ಅಂಬಿಕಾ ಆರ್ — ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಚನ್ನರಾಯಪಟ್ಟಣ.
3. ಶ್ರೀ ಶಿವರಾಂ — ಲೆಕ್ಕಾಧಿಕಾರಿಗಳು, ಸೆಸ್ಕ್, ಚನ್ನರಾಯಪಟ್ಟಣ.
4. ಶ್ರೀ ಮಲ್ಲಪ್ಪಾಚಾರ್ ಬಿ.ಎಲ್ — ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ನುಗ್ಗೇಹಳ್ಳಿ.
5. ಶ್ರೀ ರಾಮಚಂದ್ರ.ಕೆ.ಎನ್ — ಕಿರಿಯ ಇಂಜಿನಿಯರ್(ವಿ), ತಾಂತ್ರಿಕ ಶಾಖೆ, ಸೆಸ್ಕ್, ನುಗ್ಗೇಹಳ್ಳಿ.
6. ಶ್ರೀ ರಾಘವೇಂದ್ರ ಕೆ — ಸಹಾಯಕ ಇಂಜಿನಿಯರ್(ವಿ), ಸೆಸ್ಕ್, ನುಗ್ಗೇಹಳ್ಳಿ ಶಾಖೆ.
7. ಶ್ರೀ ಮೋಹನ್ ಜಿ.ಎನ್ — ಕಿರಿಯ ಇಂಜಿನಿಯರ್(ವಿ), ಸೆಸ್ಕ್, ಬಾಗೂರು ಶಾಖೆ.
8. ಶ್ರೀ ಪ್ರದೀಪ್ ಹೆಚ್.ಎಸ್ — ಕಿರಿಯ ಇಂಜಿನಿಯರ್(ವಿ), ಸೆಸ್ಕ್, ಕೆಂಬಾಳು ಶಾಖೆ.
9. ಶ್ರೀ ಶಿವಕುಮಾರ್ ಜಿ — ಕಿರಿಯ ಇಂಜಿನಿಯರ್(ವಿ), ಸೆಸ್ಕ್, ಹಿರೀಸಾವೆ ಶಾಖೆ.
10. ಶ್ರೀ ಲಕ್ಷ್ಮಯ್ಯ ಎಲ್ — ಕಿರಿಯ ಇಂಜಿನಿಯರ್(ವಿ), ಸೆಸ್ಕ್, ದಿಡಗ ಶಾಖೆ.
11. ಶ್ರೀ ಉಮಾಶಂಕರ್ ಸಿ.ಪಿ — ಉಸ್ತುವಾರಿ ಹಿರಿಯ ಸಹಾಯಕರು, ಸೆಸ್ಕ್, ನುಗ್ಗೇಹಳ್ಳಿ ಉಪ ವಿಭಾಗ.

ಹಾಜರಿದ್ದ ಎಲ್ಲಾ ಗ್ರಾಹಕರನ್ನು/ಅಧಿಕಾರಿಗಳನ್ನು ಹಾಗೂ ನೌಕರರನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಸಭೆಯಲ್ಲಿ ಈ ಕೆಳಕಂಡಂತೆ ಮನವಿಗಳನ್ನು ಸ್ವೀಕರಿಸಲಾಯಿತು.

| ಕ್ರ.ಸ | ಗ್ರಾಹಕರ ಹೆಸರು ಮತ್ತು ವಿಳಾಸ | ವಿಷಯ | ನಡಾವಳಿಗಳು |
|---|---|---|---|
| 1 | ಶ್ರೀ ದೇವರಾಜೇಗೌಡ, ಕಿರಿಸಾವೆ. | ಕಿರಿಸಾವೆ ಗ್ರಾಮದ ಸುಮಾರು 300 ಮನೆಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿರುತ್ತಾರೆ. | ಕಿರಿಸಾವೆ ಗ್ರಾಮದಲ್ಲಿ ಸುಮಾರು 300 ಮನೆಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲು ಕಾಮಗರಿಯು ಪ್ರಗತಿಯಲ್ಲಿದ್ದು ಮೆ॥ ಗುರು ಎಲೆಕ್ಟ್ರಿಕಲ್ಸ್ ಹಿರೀಸಾವೆ ರವರಿಗೆ ದಿನಾಂಕ 01-10-2018 ರೊಳಗೆ ಪೂರ್ಣಗೊಳಿಸಿ ವರದಿಯನ್ನು ನೀಡಲು ಹಿರೀಸಾವೆ ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು. |

| | | | |
|---|---|---|---|
| 2 | ಶ್ರೀ ಕೆ.ಎಂ.ಬಾಸ್ಕರ್, ದಾಸನಕೆರೆ ಹಿರೀಸಾವೆ. | ದಾಸನಕೆರೆ ಗ್ರಾಮದ ತೋಟದ ಮನೆಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿರುತ್ತಾರೆ. | ಹಿರೀಸಾವೆ ಶಾಖಾಧಿಕಾರಿರವರಿಗೆ ಕೂಡಲೇ ಸ್ಥಳ ಪರೀಶೀಲಿಸಿ ಸ್ವಂತ ಖರ್ಚಿನಲ್ಲಿ ಕಾಮಗಾರಿಯನ್ನು ಮಾಡಿಕೊಳ್ಳಲು ಅಂದಾಜು ಪಟ್ಟಿಯನ್ನು ತಯಾರಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು. |
| 3 | ಶ್ರೀ ಬಸವರಾಜು, ತಿಮ್ಮಾಲಪುರ. | ಸರ್ವೆ ನಂ 43ರಲ್ಲಿ 25 ಕೆವಿಎ ಪರಿವರ್ತಕವನ್ನು ಅಳವಡಿಸಿದ್ದು ಒತ್ತಡ ಜಾಸ್ತಿಯಾಗಿದ್ದು ಪರಿವರ್ತಕದ ಜಂಪ್‌ನ್ನು ತೆಗೆಸಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿತ್ತಾರೆಂದು ಕೋರಿರುತ್ತಾರೆ. | ಕಂಬಾಳು ಶಾಖಾಧಿಕಾರಿರವರಿಗೆ ಕೂಡಲೇ ಸ್ಥಳ ಪರೀಶೀಲಿಸಿ ಅನಧಿಕೃತ ಪಂಪ್‌ಸೆಟ್‌ಗಳ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ಉಳಿದ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪುನರ್ ಸಂಪರ್ಕವನ್ನು ಕಲ್ಪಿಸಲು ಸೂಚಿಸಲಾಯಿತು. |
| 4 | ವಿಜಯಕುಮಾರ್, ಗ್ರಾಮ ಪಂಚಾಯಿತಿ ಸದಸ್ಯ, ನಾಗೇನಹಳ್ಳಿ. | ಜನ ಸಂಪರ್ಕ ಸಭೆ ನಡೆಯುವ ದಿನಾಂಕವನ್ನು ಎಲ್ಲಾ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಯವರಿಗೆ ತಿಳಿಸಬೇಕೆಂದು ಕೋರಿರುತ್ತಾರೆ, | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ, ಕಿರಿಯ ಇಂಜಿನಿಯರ್(ತಾಂ), ರವರಿಗೆ ಮತ್ತು ಎಲ್ಲಾ ಶಾಖಾಧಿಕಾರಿರವರಿಗೆ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಸಂದೇಶವನ್ನು ರವಾನಿಸಲು ಸೂಚಿಸಲಾಯಿತು. |
| 5 | ನಾಗೇಶ್, ಭಕ್ತರಹಳ್ಳಿ, ಕೆಂಬಾಳು. | ಸದರಿಯವರ 8ಹೆಚ್.ಪಿ ಅಡಿಕೆ ಪ್ರೆಸ್ಸಿಂಗ್ ಉದ್ಯಮಕ್ಕೆ ಅರ್ಜಿಯನ್ನು ನೋಂದಾಯಿಸಿದ್ದು ಶೀಘ್ರದಲ್ಲಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕೋರಿರುತ್ತಾರೆ, | ಕೆಂಬಾಳು ಶಾಖಾಧಿಕಾರಿರವರಿಗೆ ಕೂಡಲೇ ಸ್ಥಳ ಪರೀಶೀಲಿಸಿ ಅಂದಾಜು ಪಟ್ಟಿಯನ್ನು ತಯಾರಿಸಿ ಕಾರ್ಯದೇಶವಾದ ನಂತರ ಇಲಾಖಾ ಸಿಬ್ಬಂದಿಯವರನ್ನು ಉಪಯೋಗಿಸಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಿ 10ದಿನದೊಳಗೆ ವರಧಿಯನ್ನು ನೀಡಲು ಸೂಚಿಸಲಾಯಿತು. |
| 6 | ವಾಸು, ತಾಲ್ಲೂಕು ಪಂಚಾಯಿತಿ ಸದಸ್ಯ, ಎಂ.ಕೆ.ಚಿಕ್ಕೇನಹಳ್ಳಿ. | ಎಂ.ಕೆ.ಚಿಕ್ಕೇನಹಳ್ಳಿ ಗ್ರಾಮದ ಪಕ್ಕದಲ್ಲಿರುವ 10 ತೋಟದ ಮನೆಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿರುತ್ತಾರೆ. | ನುಗ್ಗೇಹಳ್ಳಿ ಶಾಖಾಧಿಕಾರಿರವರಿಗೆ ಕೂಡಲೇ ಸ್ಥಳ ಪರೀಶೀಲಿಸಿ ಸ್ವಂತ ಖರ್ಚಿನಲ್ಲಿ ಕಾಮಗಾರಿಯನ್ನು ಮಾಡಿಕೊಳ್ಳಲು ಅಂದಾಜು ಪಟ್ಟಿಯನ್ನು ತಯಾರಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು. |
| 7 | ಬೋರೆಗೌಡ, ಮೆಳ್ಳಹಳ್ಳಿ, ದಿಡಗ. | ಮೆಳ್ಳಹಳ್ಳಿ ಗ್ರಾಮದ ರಮೇಶ್ ಮತ್ತು ಶಿವೇಗೌಡ ರವರ ಮನೆ ಹತ್ತಿರ ಶಿಥಿಲಗೊಂಡಿರುವ ಕಂಬಗಳನ್ನು ಬದಲಾಯಿಸಲು ಕೋರಿರುತ್ತಾರೆ. | ದಿಡಗ ಶಾಖಾಧಿಕಾರಿರವರಿಗೆ ಕೂಡಲೇ ಸ್ಥಳ ಪರೀಶೀಲಿಸಿ ಶಿಥಿಲಗೊಂಡಿರುವ ಮತ್ತು ತುಕ್ಕು ಹಿಡಿದಿರುವ ಕಂಬಗಳನ್ನು ಬದಲಾಯಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಶೀಘ್ರದಲ್ಲಿ ಸಿಬ್ಬಂದಿಯವರ ಉಪಯೋಗಿಸಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಿ ವರಧಿಯನ್ನು ನೀಡಲು ಸೂಚಿಸಲಾಯಿತು. |

ಈ ಸಭೆಯನ್ನು ಮದ್ಯಾಹ್ನ 03:00 ಗಂಟೆಗೆ ಪ್ರಾರಂಬಿಸಿ ಸಂಜೆ 05:30 ಗಂಟೆಯವರೆಗೆ ನಡೆಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

*ಇಂತಿ ತಮ್ಮ ವಿಶ್ವಾಸಿ*

*ಸಹಾಯಕ ಕಾರ್ಯಪಾಲಕ ಅಭಿಯಂತರರು(ವಿ).,*
*ಚಾವಿಸನಿನಿ., ಕಾ ಮತ್ತು ಪಾ ಉಪವಿಭಾಗ,*
*ನುಗ್ಗೇಹಳ್ಳಿ.*

ಪ್ರತಿಯನ್ನು:

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ ಕಛೇರಿ, ಚಾವಿಸನಿನಿ, ಹಾಸನರವರ ಅವಗಾಹನೆಗಾಗಿ.
2. ಕಾರ್ಯಪಾಲಕ ಇಂಜಿನಿಯರ್(ವಿ), ಕಾ ಮ ಪಾ ವಿಭಾಗ ಕಛೇರಿ, ಚಾವಿಸನಿನಿ, ಚನ್ನರಾಯಪಟ್ಟಣರವರ ಅವಗಾಹನೆಗಾಗಿ.
3. ಶಾಖಾಧಿಕಾರಿಗಳು ಚಾವಿಸನಿನಿ, ನುಗ್ಗೇಹಳ್ಳಿ, ಕೆಂಬಾಳು, ಬಾಗೂರು, ಹಿರೀಸಾವೆ, ದಿಡಗ ರವರ ಮಾಹಿತಿಗಾಗಿ.
4. ಕಛೇರಿ ಕಡತಕ್ಕೆ.